**ಓ.ಎಸ್. ನಂ. 146/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 9.1.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದಃ**

ನನ್ನ ತಂದೆಯ ಹೆಸರು ಜವರಪ್ಪ ಆಗಿರುತ್ತದೆ. ಅವರ ತಂದೆಯ ಹೆಸರು ಮಾದಯ್ಯ ಆಗಿರುತ್ತದೆ. ಸದರಿ ಮಾದಯ್ಯ ನವರಿಗೆ 3 ಜನ ಸಹೋದರರು ಇದ್ದು ಅವರ ಹೆಸರು ಸೋಮಯ್ಯ, ಮಲಿಯಯ್ಯ ಮತ್ತು ಜವರಯ್ಯ ಎಂದರೆ ಸರಿ. ನನ್ನ ತಂದೆಗೆ ನಾವು ಒಟ್ಟು 8 ಜನ ಮಕ್ಕಳು ಇರುತ್ತೇವೆ. 8 ಜನ ಸೇರಿ ಈ ದಾವೆ ಹಾಕಿರುವುದಿಲ್ಲ ಎಂದರೆ ಸಾಕ್ಷಿದಾರರು 3 ಜನರು ತೀರಿಕೊಂಡಿರುತ್ತಾರೆ ಎನ್ನುವರು. ನನ್ನ ತಂದೆಗೆ 8 ಜನ ಮಕ್ಕಳಿದ್ದು, 3 ಜನ ತೀರಿಕೊಂಡಿರುವ ಬಗ್ಗೆ ದಾವಪತ್ರದಲ್ಲಿ ಹೇಳಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಾತನ ಸಹೋದರನ ಮಗಳು ಎನ್ನುವರು. ನನ್ನ ತಂದೆಯ ತಂಗಿ ಮಹದೇವಮ್ಮ ಎಂಬುವವರು ತೀರಿಕೊಂಡಿರುತ್ತಾರೆ ಎಂದು ಮರಣ ಪ್ರಮಾಣಪತ್ರವನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅವರು ಮನೆ ಬಿಟ್ಟು ಹೋಗಿದ್ದು ಅವರು ತೀರಿಕೊಂಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ತೀರಿಕೊಂಡ ಮಾಹಿತಿ ಬಂದ ನಂತರ ಎಲ್ಲ ದಾಖಲೆಯನ್ನು ನೀಡಿ ಮರಣ ಪ್ರಮಾಣಪತ್ರ ಪಡೆದುಕೊಂಡಿರುತ್ತೇನೆ ಎನ್ನುವರು. ಅವರು ಎಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ತೀರಿಕೊಂಡಿರುವ ಬಗ್ಗೆ ಮಾಹಿತಿಯನ್ನು ನನ್ನ ಅಜ್ಜಿ ನೀಡಿರುತ್ತಾರೆ. ನಮ್ಮ ಮನೆಯಲ್ಲಿ ಅವರ ಶವ ಸಂಸ್ಕಾರವನ್ನು ಮಾಡಿರುವುದಿಲ್ಲ. ಅವರು ತೀರಿಕೊಂಡಿರುವ ಬಗ್ಗೆ ನ್ಯಾಯಾಲಯದಲ್ಲಿ ಘೋಷಣಾತ್ಮಕ ಪರಿಹಾರ ಕೋರಿ ದಾವೆ ಸಲ್ಲಿಸಿ ಮರಣ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇವೆ. ನನಗೆ ಈಗ 36 ವರ್ಷ ವಯಸ್ಸಾಗಿರುತ್ತದೆ. ದಾವಆಸ್ತಿಯು ಮಾದಯ್ಯನವರ ಹೆಸರಿಗೆ ಮಂಜೂರಾದಾಗ ನಾನು ಜನಿಸಿರಲಿಲ್ಲ. ದಾವಆಸ್ತಿ ಮಂಜೂರಾದಾಗ ನನ್ನ ತಾತ ಮತ್ತು ಅವರ ಸಹೋದರರು ಹೇಗೆ ವಾಸವಾಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು 10 ನೇ ತರಗತಿ ಓದಿರುತ್ತೇನೆ. ನಾನು ದಾವಆಸ್ತಿಯ ಪಹಣಿಯನ್ನು ಪ್ರತಿವರ್ಷ ಪಡೆದುಕೊಳ್ಳುತ್ತಿದ್ದೆನು. ನಾನು ಪಹಣಿಗಳನ್ನು ಪಡೆದುಕೊಂಡಾಗ ದಾವಆಸ್ತಿಯ ಪೈಕಿ 2-25½ ಎಕರೆ ನನ್ನ ತಾತನ ಹೆಸರಿಗೆ ಮತ್ತು 2-25½ ಎಕರೆ ಆಸ್ತಿಯು ಪ್ರತಿವಾದಿಯರ ತಂದೆಯ ಹೆಸರಿಗೆ ಖಾತೆಯಾಗಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ನನ್ನ ತಾತನ ಹೆಸರಿನಲ್ಲಿದ್ದ 2-25½ ಎಕರೆ ಆಸ್ತಿಯ ಖಾತೆಯನ್ನು ನನ್ನ ತಂದೆಯ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ. ನನ್ನ ತಾತನ ಸಹೋದರ ಸೋಮಯ್ಯ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸೋಮಯ್ಯನವರ ಹೆಸರಿನಲ್ಲಿದ್ದ 2-25½ ಎಕರೆ ಜಮೀನಿನ ಖಾತೆಯು ಅವರ ಹೆಂಡತಿ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ.

ಪ್ರತಿವಾದಿಯರು ಸದರಿ ಸೋಮಯ್ಯನವರ ಮಕ್ಕಳು ಎಂದರೆ ಸರಿ. ಸದರಿ ಸೋಮಯ್ಯ ಮತ್ತು ಅವರ ಹೆಂಡತಿ ತೀರಿಕೊಂಡ ನಂತರ 2-25½ ಎಕರೆಯ ಖಾತೆಯು ಪ್ರತಿವಾದಿಯರ ಹೆಸರಿಗೆ ಎಂ.ಆರ್ ನಂ.5/2022-23 ರಂತೆ ಜಂಟಿ ಖಾತೆಯಾಗಿರುತ್ತದೆ ಎಂದರೆ ಸರಿ. ನಾನು ಸೋಮಯ್ಯನವರ ಹೆಸರಿನಲ್ಲಿದ್ದ ಖಾತೆ, ಅವರ ಹೆಂಡತಿ ಮತ್ತು ಈಗ ಅವರ ಮಕ್ಕಳ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನೆ ಮಾಡಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ನನ್ನ ತಾತ ಮತ್ತು ಅವರ ಸಹೋದರರು ಎಲ್ಲ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು ಸ್ವಯಾರ್ಜಿತ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಿಲ್ಲ ಎನ್ನುವರು. ದಾವಆಸ್ತಿಯು ನನ್ನ ತಾತನ ಮಾದಯ್ಯ ನವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ನನ್ನ ತಾತ ಮತ್ತು ಅವರ ಸಹೋದರರು 1960 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಿಭಾಗವಾದ ನಂತರ ಅವರವರ ಪಾಲಿಗೆ ಬಂದ ಆಸ್ತಿಯ ಖಾತೆಗಳನ್ನು ಬದಲಾವಣೆ ಮಾಡಿಸಿಕೊಂಡು ಅವರವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.